**ದಿನಾಂಕಃ 19-01-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಯು.ಡಿ. ಡಿ ವಕೀಲರಿಂದಃ**

1. ಕೈಗಡ ಸಾಲ ನೀಡಲು ಮತ್ತು ಬಡ್ಡಿ ವ್ಯವಹಾರ ಮಾಡಲು ಸನ್ನದು ಪ್ರಮಾಣ ಪತ್ರದಲ್ಲಿ ನಮೂದು ಇಲ್ಲ. ನಾನು ಮನಿಲೆಂಡಿಂಗ್ ಲೈಸನ್ಸ ಪಡೆದಿಲ್ಲ. ಬೇರೆಯವರಿಗೆ ಹಣ ನೀಡುವ ಹಾಗೂ ಮುಂಗಡ ನೀಡುವ ಕುರಿತು ಪಾಲುಗಾರಿಕೆ ಪತ್ರದಲ್ಲಿ ಬರೆದಿಲ್ಲ ಎಂದರೆ ನಿಜ. ವ್ಯವಹಾರ ನಡೆದಿದೆ ಎಂದು ಹೇಳಲಾದ ವರ್ಷದ ಆದಾಯ ತೆರಿಗೆ ರಿಟರ್ನ್ಸ್ ಹಾಜರು ಪಡಿಸಿಲ್ಲ ಎಂದರೆ ನಿಜ. ನಾನು ಹಾಜರುಪಡಿಸಿರುವ ಸನ್ನದು ದಿಃ 04-05-2019 ರಂದು ನವೀಕರಣಗೊಂಡಿದೆ ಎಂದರೆ ನಿಜ, ಅದರ ಹಿಂದಿನ ಅವಧಿಯ ಸನ್ನದು ಇಲ್ಲ. ನಾನು ಹಾಜರು ಪಡಿಸಿರುವ ನಿಪಿ-20 ರಲ್ಲಿಯ ನೋಂದಣಿ ಪ್ರಮಾಣ ಪತ್ರವನ್ನು ದಿಃ01-07-2017 ರ ಹೊಣೆಗಾರಿಕೆಯೊಂದಿಗೆ ದಿಃ 08-07-2018 ರಂದು ನೀಡಲಾಗಿದೆ ಎಂದರೆ ನಿಜ. 2013 ರಿಂದ 16 ನೇ ಸಾಲಿನಲ್ಲಿ ಶರಣಬಸವೇಶ್ವರ ಟ್ರೇಡಿಂಗ್ ಕಂಪನಿ ಅಸ್ತಿತ್ವದಲ್ಲಿದ್ದ ಕುರಿತು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಕಂಪನಿ ಇತ್ತು ಆದರೆ ದಾಖಲೆ ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ಕಂಪನಿ ಚಾಲ್ತಿಯಲ್ಲಿ ಇಲ್ಲದೇ ಇರುವುದರಿಂದ ಅದರ ಕುರಿತು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು, ಪಾಲುಗಾರರಾದ ಬಿ ಕೆ ಜಗಳೂರು ಅವರು ಪಾಲುಗಾರಿಕೆಯಿಂದ ಹೊರಗೆ ಹೋದ ನಂತರ ಪ್ರಸ್ತುತ ದಾಖಲೆಗಳನ್ನು ಮಾಡಲಾಗಿದೆ ಎಂದು ನುಡಿಯುತ್ತಾರೆ. ಹಳೇ ಪಾಲುಗಾರಿಕೆ ವ್ಯವಹಾರದ ಆಸ್ತಿ ಮತ್ತು ಋಣ ಭಾರದ ಕುರಿತು ದಾಖಲೆ ಹಾಜರು ಪಡಿಸಿಲ್ಲ ಆದರೆ ಹಾಜರುಪಡಿಸಬಲ್ಲೆ. ಈ ಹಿಂದೆ ಇತ್ತು ಎಂದು ಹೇಳಲಾದ ಪಾಲುಗಾರಿಕೆಯ ಸಂಸ್ಥೆ ಅಥವಾ ಈಗ ಇರುವ ಟ್ರೇಡಿಂಗ್ ಕಂಪನಿಯಿಂದ ಆರೋಪಿತನು

ಯಾವತ್ತೂ ಕೈಗಡ ಸಾಲ ಪಡೆದಿಲ್ಲ ಎಂದರೆ ಸಾಕ್ಷಿಯು ಆತ ಕೈಗಡ ಸಾಲ ಪಡೆದಿಲ್ಲ ಆದರೆ ಚೆಕ್ ಮೂಲಕ ವ್ಯವಹಾರ ಆಗಿದೆ ಎಂದು ನುಡಿಯುತ್ತಾರೆ. ಹತ್ತಿ ವ್ಯವಹಾರದ ಕುರಿತು ಚೆಕ್ ನೀಡಿದ್ದೇವೆ ಎಂದರೆ ಸರಿಯಲ್ಲ . ಆರೋಪಿತ ಯಾವುದೇ ಹಣ ನೀಡಲು ಬಾಧ್ಯಸ್ಥನಲ್ಲ ಆದರೂ ಸಹ ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.